ಕರ್ನಾಟಕ ವಿಧಾನಸಭೆ
KARNATAKA LEGISLATIVE ASSEMBLY

Tuesday, the 21st March 1978, Phalguna 30, 1899 S.E.

The House met in the Assembly Chamber, Vidhana Soudha, at One of the Clock.

[MR. SPEAKER (Sri P. Venkataramana).— in the Chair.]

Extension of last date for appearing the Degree Examinations

ಶ್ರೀ ಪಿ. ರಾಮ್‌ದೇವ್.—ಮಾನ್ಯ ಅಧ್ಯಕ್ಷರೇ, ನಿನ್ನೆ ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆ. ಅದರ ಉದ್ದೇಶ ಈಡೇರಿದೆ ನಿನ್ನೆ ಆಗಿರತಕ್ಕ ಘಟನೆ ಏನಿದೆ, ಆ ಘಟನೆ ಸರಿಯಲ್ಲ, ಅದನ್ನು ಖಂಡಿಸತಕ್ಕಂಥ ಒಂದು ಕಾಲಿಂಗ್ ಅಟೆನ್‌ಷನ್ ನೋಟೀಸನ್ನು ಇವತ್ತು ಕಳುಹಿಸಿಕೊಟ್ಟಿದ್ದೇನೆ. ಅದನ್ನು ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಕಟ್ಟುವುದಕ್ಕೆ ನಿನ್ನೆ ಕೊನೆಯ ತಾರೀಖು. ಅನೇಕ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ಮಾರ್ಕ್ಸ್ ಕಾರ್ಡ್ ಸಿಕ್ಕಿಲ್ಲ, ಪರೀಕ್ಷೆಗಳಿಗೆ ಅಪ್ಲಿಕೇಷನ್ ಕೊಡುವುದಕ್ಕೆ ಅನೇಕ ವಿದ್ಯಾರ್ಥಿಗಳಿಗೆ ಸಾಧ್ಯವಾಗಿಲ್ಲ. ಎಕ್ಸಟರ್ನಲ್ ಎಗ್ಸಾಮಿನೇಷನ್‌ಗೆ ಕ ಟ್ಟುವುದಕ್ಕೆ ಕೊನೆಯ ತಾರೀಖಿನ್ನು ಮುಂದುವರಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಸಂಬಂಧಪಟ್ಟ ಮಂತ್ರಿಗಳಿಗೆ ಹೇಳಿಕಳುಹಿಸುತ್ತೇನೆ, ಅವರಿಂದ ಮಾಹಿತಿಗಳು ಬಂದ ಮೇಲೆ ತಾವು ವಿವರ ಹೇಳಿ. ಕಾಲಿಂಗ್ ಅಟೆನ್‌ಷನ್ ನೋಟೀಸ್ ಕೊಡಬಹುದು.

ಶ್ರೀ ಪಿ. ರಾಮದೇವ್.—ಕಾಲಿಂಗ್ ಅಟೆನ್‌ಷನ್ ನೋಟೀಸನ್ನು ಕಳುಹಿಸಿಕೊಟ್ಟಿದ್ದೇನೆ.ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಕಟ್ಟುವುದಕ್ಕೆ ನಿನ್ನೆ ಕೊನೇ ತಾರೀಖು ಆಗಿಹೋಗಿದೆ. ಮಾನ್ಯ ವಿದ್ಯಾಮಂತ್ರಿಗಳಿಗೆ ಹೇಳಿದರೆ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ.

ಅಧ್ಯಕ್ಷರು.—ಅದದ್ನು ನೋಡುತ್ತೇನೆ.

Bursting of a transformer in Thirthalli

ಶ್ರೀ ಭಾವೂರಾವ್ ದೇಶಪಾಂಡೆ.—ತಮ್ಮ ಮೂಲಕ ಒಂದು ವಿಷಯವನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ತೀರ್ಥಹಳ್ಳಿ ತಾಲ್ಲೂಕಿನಿಂದ ಒಂದು ಟೆಲಿಗ್ರಾಂ ಬಂದಿದೆ. ಅಲ್ಲಿ ಟ್ರಾನ್ಸ್‌ಫಾರ್ಮರ್ ಸುಟ್ಟು ಹೋಗಿದೆ. ಇದರಿಂದ ಪಂಪ್‌ಸೆಟ್‌ಗಳನ್ನು ನಡೆಸುವುದಕ್ಕೆ ಅನಾನುಕೂಲವಾಗಿದೆ. ಆದುದರಿಂದ ಟ್ರಾನ್ಸ್‌ಫಾರ್ಮರ್‌ನ್ನು ರಿಪ್ಲೇಸ್ ಮಾಡಬೇಕು ಎಂದು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸುತ್ತೇನೆ.

SRI C. M. ARMUGAM,—My submission is that normally such a statement should be permitted before we enter upon the regular business of the House. Since the Question Hour was not there, I thought it fit to speak on my notice under Rule 312 now and there after permit the Minister to lay the papers.

MR. SPEAKER.—Let the Hon. Minister for Revenue lay the papers on the Table. I shall permit the hon. member there after to speak.